158ನೇ ಎಲು ಉ SL NO: 34 ದಿ: 12-03-2026

<u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾಗರಾಜು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರಿಸುವ ಕುರಿತು.**

**ಪ್ರಶ್ನೆ:**

ದಿನಾಂಕ:09.03.2026 ರಂದು "ಕೇಂದ್ರದ ಯೋಜನೆ ಕೈ ತಪ್ಪುವ ಭೀತಿ" ಎಂದು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. "ದೇಶದ ಆಯ್ದ ಸ್ಮಾರ್ಟ್ ನಗರಗಳಿಗೆ ಮಾತ್ರ ದೊರೆಯುವ ಕೇಂದ್ರ ಸರ್ಕಾರದ ಪ್ರತಿಷ್ಠಿತ 'ಸಿಟೀಸ್ 2.0'ಗೆ ಕರ್ನಾಟಕದಿಂದ ಆಯ್ಕೆಯಾದ ಏಕೈಕ ನಗರ ಎಂಬ ಹೆಗ್ಗಳಿಕೆ ಪಡೆದಿದ್ದ ಬೆಳಗಾವಿ, ಇದೀಗ ಆ ಮಹತ್ವದ ಯೋಜನೆ ಕಳೆದುಕೊಳ್ಳುವ ಅಂಚಿನಲ್ಲಿದೆ ಎಂಬ ಆತಂಕ ವ್ಯಕ್ತವಾಗಿದೆ. ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯಲ್ಲಿನ ಆಡಳಿತಾತ್ಮಕ ಗೊಂದಲ, ವಿವಾದಾತ್ಮಕ ನೇಮಕಾತಿಗಳು ಮತ್ತು ನಿರಂತರ ವಿಳಂಬ ಯೋಜನೆಯ ಭವಿಷ್ಯವೇ ಅನುಮಾನಕ್ಕೆ ದೂಡಿದೆ.

ಸ್ಮಾರ್ಟ್ ಸಿಟಿ ಅಧಿಕಾರಿಗಳು ನಗರಾಭಿವೃದ್ಧಿ ಇಲಾಖೆಗೆ ಈ ವಿಷಯದಲ್ಲಿ ಬೆಳಗಾವಿ ಮಹಾನಗರ ಪಾಲಿಕೆ ಸಹಕಾರ ಕೊಡುತ್ತಿಲ್ಲ ಎನ್ನುವ ಪತ್ರ ಬರೆದಿದ್ದಾರೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. 2024ರ ಫೆಬ್ರುವರಿಯಲ್ಲಿ ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಆಯ್ಕೆ ಸಮಿತಿಯ ಮುಂದೆ ಬೆಳಗಾವಿ ಮಹಾನಗರ ಪಾಲಿಕೆ ಮತ್ತು ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಯುಕ್ತವಾಗಿ ತಯಾರಿಸಿದ ಯೋಜನೆ ಮಂಡನೆಯಾಗಿ ಆಯ್ಕೆಯಾದದ್ದು ಬೆಳಗಾವಿಗೆ ದೊಡ್ಡ ಸಾಧನೆ ಎಂದು ಪರಿಗಣಿಸಲಾಗಿತ್ತು. ಆದರೆ ಯೋಜನೆ ಮುಂದುವರೆಯಬೇಕಾದ ಹಂತದಲ್ಲೇ ಹಲವು ಆಡಳಿತಾತ್ಮಕ ಅಡಚಣೆಗಳು ಎದುರಾದವು. ಯೋಜನೆ ನಿರ್ವಹಣೆಗೆ ಯೋಜನಾ ಸಂಯೋಜಕ, ಪರಿಸರ ಹಾಗೂ ಸಾಮಾಜಿಕ ಸುರಕ್ಷತಾ ನೋಡಲ್ ಅಧಿಕಾರಿ ಹಾಗೂ ಯೋಜನಾ ಸಂಪರ್ಕ ಅಧಿಕಾರಿ ಎಂಬ ಮೂರು ಪ್ರಮುಖ ಹುದ್ದೆ ನೇಮಕ ಮಾಡಬೇಕೆಂದು ಕೇಂದ್ರ ಸರ್ಕಾರ ಸೂಚನೆ ನೀಡಿತ್ತು. ಆದರೆ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇಲ್ಲದಿರುವುದಾಗಿ ಆರೋಪಗಳು ಕೇಳಿಬಂದಿವೆ. ಮಾಹಿತಿ ಹಕ್ಕು ಕಾಯ್ದೆ ಮೂಲಕ ಲಭಿಸಿದ ದಾಖಲೆಗಳ ಪ್ರಕಾರ, ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿ ಈಗಾಗಲೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲವರನ್ನು ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಲಾಗಿದೆ ಎಂಬ ಆರೋಪಗಳು ವ್ಯಕ್ತವಾಗಿದೆ. ವಿಶೇಷವಾಗಿ ಯೋಜನಾ ಸಂಯೋಜಕ ಹುದ್ದೆಗೆ ಅನುಭವದ ಮಾನದಂಡವಿಲ್ಲದ ವ್ಯಕ್ತಿಯನ್ನು ನೇಮಕ ಮಾಡಲಾಗಿದೆ ಎಂಬ ಪ್ರಶ್ನೆಗಳು ಉದ್ಭವಿಸಿವೆ."ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ತಕ್ಷಣವೇ ಆಡಳಿತಾತ್ಮಕ ಗೊಂದಲಗಳನ್ನು ಸರಿಪಡಿಸಿ ನೇಮಕಾತಿಗಳಲ್ಲಿ ಪಾರದರ್ಶಕತೆ ಕ್ರಮಗಳನ್ನು ಕೈಗೊಂಡು ಈ ಮಹತ್ವಕಾಂಕ್ಷಿ ಯೋಜನೆಯನ್ನು ಬೆಳಗಾವಿ ನಗರದಲ್ಲಿ ಅನುಷ್ಠಾನಗೊಳ್ಳುವಂತೆ ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಕುರಿತು.

**ಉತ್ತರ :**

- ಕೇಂದ್ರ ಪ್ರಾಯೋಜಿತ City Investments to Innovate, Integrate and Sustain – 2.0 (CITIIS 2.0) ಯೋಜನೆಯಡಿ ಬೆಳಗಾವಿ ನಗರವು ದಿನಾಂಕ: 04.03.2024 ರಂದು ಆಯ್ಕೆಯಾಗಿರುತ್ತದೆ.
- ಯೋಜನಾ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಬೆಳಗಾವಿ ನಗರದಿಂದ ದಿನಾಂಕ: 03-03-2025 ರಂದು ಒಪ್ಪಂದ ಸಹಿ ಮಾಡಲಾಗಿದ್ದು, ಇದರ ಅನುಸಾರ ಬೆಳಗಾವಿ ನಗರಕ್ಕೆ ರೂ.75.00 ಕೋಟಿ ಅನುದಾನ ನಿಗಧಿಪಡಿಸಲಾಗಿರುತ್ತದೆ.
- CITIIS 2.0 ಯೋಜನೆಯಡಿ ಆಯ್ಕೆಯಾದ ನಗರಗಳಲ್ಲಿನ ಘನ ತ್ಯಾಜ್ಯ ನಿರ್ವಹಣೆ ಉತ್ತಮಗೊಳಿಸಲು ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದರಿಂದ, ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಬೆಳಗಾವಿ ಮಹಾನಗರ ಪಾಲಿಕೆಯ ಸಮನ್ವಯದೊಂದಿಗೆ ಯೋಜನಾ ಅನುಷ್ಠಾನವನ್ನು ಮಾಡಲಾಗುತ್ತಿದೆ.

- CITIIS 2.0 ಯೋಜನೆಯಡಿಯಲ್ಲಿನ ಅನುದಾನವು ಸಾಲದ ರೂಪದಲ್ಲಿದ್ದು, ಈ ಪೈಕಿ ರಾಜ್ಯ ಸರ್ಕಾರವು ಶೇಕಡಾ 50% ರಷ್ಟು ಮೊತ್ತವನ್ನು ಹಿಂಬರಿಸಬೇಕಿರುತ್ತದೆ ಮತ್ತು ಆಯ್ಕೆಯಾದ ನಗರಗಳು ಯೋಜನಾ ಮೊತ್ತದ ಶೇಕಡಾ 20% ರಷ್ಟು ಮೊತ್ತವನ್ನು ಬರಿಸಬೇಕಾಗಿರುತ್ತದೆ. ಘನ ತ್ಯಾಜ್ಯ ನಿರ್ವಹಣೆಗಾಗಿ ಸ್ವಚ್ಛ ಭಾರತ ಅಭಿಯಾನದಡಿಯಲ್ಲಿಯೂ ಸಹ ಅನುದಾನವು ಲಭ್ಯವಿದ್ದು, ಸ್ವಚ್ಛ ಭಾರತ ಅಭಿಯಾನದಲ್ಲಿನ ಅನುದಾನದ ಪೈಕಿ ಕೈಗೊಳ್ಳಲು ಸಾಧ್ಯವಿರದ ಕಾಮಗಾರಿಗಳನ್ನು ಸಾಲದ ರೂಪದಲ್ಲಿರುವ CITIIS 2.0 ಯೋಜನೆಯಡಿ ಕೈಗೊಳ್ಳುವುದು ಸೂಕ್ತವಾಗಿರುತ್ತದೆ.
- CITIIS 2.0 ಯೋಜನೆಯಲ್ಲಿನ ಅಂಶಗಳನ್ನು ಗುರುತಿಸಲು ಹಾಗೂ ಅನುಷ್ಠಾನಗೊಳಿಸಬಹುದಾದ ಕಾಮಗಾರಿಗಳಿಗೆ ವರದಿ ತಯಾರಿಸಲು ನೆರವಾಗಲು ಅಭಿಯಾನದ ಮಾರ್ಗಸೂಚಿಯಲ್ಲಿ ಈ ಕೆಳಗಿನ ಮೂರು ಹುದ್ದೆಗಳನ್ನು ಗುರುತಿಸಲಾಗಿರುತ್ತದೆ.
  i. ಯೋಜನಾ ಸಂಯೋಜಕರು (Project Co-Ordinator)
  ii. ಪರಿಸರ ಹಾಗೂ ಸಾಮಾಜಿಕ ಸುರಕ್ಷತಾ ಅಧಿಕಾರಿ (Environment & Social Safeguard Officer)
  iii. ಪಬ್ಲಿಕ್ ಎಂಗೇಜ್ಮೆಂಟ್ ಅಧಿಕಾರಿ (Public Engagement Officer)
- ಈ ಹುದ್ದೆಗಳ ನೇಮಕಾತಿಗಾಗಿ ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ದಿನಾಂಕ: 04.07.2024 ಮತ್ತು 21.08.2024 ರಂದು ನೇಮಕಾತಿ ಪ್ರಕಟಣೆ ಹೊರಡಿಸಿ ಮೂರು, ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.
- ಯೋಜನಾ ಸಂಯೋಜಕರು (Project Co-Ordinator) ಹುದ್ದೆಯ ನೇಮಕಾತಿಯಲ್ಲಿ ಮಾನದಂಡಗಳನ್ನು ಅನುಸರಿಸದೇ ನೇಮಕಾತಿ ನಡೆದಿದೆ ಎಂದು ದೂರು ಬಂದ ಹಿನ್ನೆಲೆಯಲ್ಲಿ, ದಿನಾಂಕ : 26.12.2024 ರಂದು ನಡೆದ ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ನಿರ್ದೇಶಕರ ಮಂಡಳಿ ತೀರ್ಮಾನದ ಅನುಸಾರ ಈ ಹುದ್ದೆಯ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿರುತ್ತದೆ ಮತ್ತು ಯೋಜನಾ ಸಂಯೋಜಕರು (Project Co-Ordinator) ಹುದ್ದೆಯ ಪ್ರಭಾರವನ್ನು ಕಾರ್ಯಪಾಲಕ ಅಭಿಯಂತರರು ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಇವರಿಗೆ ಹೆಚ್ಚುವರಿಯಾಗಿ ನೀಡಲಾಗಿರುತ್ತದೆ.
- ಮುಂದುವರೆದು, ಪರಿಸರ ಹಾಗೂ ಸಾಮಾಜಿಕ ಸುರಕ್ಷತಾ ಅಧಿಕಾರಿ (Environment & Social Safeguard Officer)ಈ ಹುದ್ದೆಯ ಗುತ್ತಿಗೆಯ ಅವಧಿಯನ್ನು ದಿನಾಂಕ:30.12.2025 ರಂದು ನಡೆದ ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ನಿರ್ದೇಶಕರ ಮಂಡಳಿ ತೀರ್ಮಾನದ ಅನುಸಾರ ಮುಕ್ತಾಯಗೊಳಿಸಲಾಗಿರುತ್ತದೆ.
- ಯೋಜನಾ ಅನುಷ್ಠಾನಕ್ಕಾಗಿ ತೊಂದರೆಯಾಗದಂತೆ ಈ ಹುದ್ದೆಗಳ ಪ್ರಭಾರವನ್ನು ಈ ಕೆಳಗೆ ಸೂಚಿಸಿರುವಂತೆ ಬೆಳಗಾವಿ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಅಧಿಕ ಪ್ರಭಾರ ನೀಡಲಾಗಿರುತ್ತದೆ.
  i. ಯೋಜನಾ ಸಂಯೋಜಕರು (Project Co-Ordinator) ಹುದ್ದೆಯನ್ನು ಕಾರ್ಯಪಾಲಕ ಅಭಿಯಂತರರು, ಬೆಳಗಾವಿ ಮಹಾನಗರ ಪಾಲಿಕೆ ಇವರಿಗೆ ಅಧಿಕ ಪ್ರಭಾರ ನೀಡಲಾಗಿದೆ.
  ii. ಪರಿಸರ ಹಾಗೂ ಸಾಮಾಜಿಕ ಸುರಕ್ಷತಾ ಅಧಿಕಾರಿ (Environment & Social Safeguard Officer) ಹುದ್ದೆಯನ್ನು ಪರಿಸರ ಅಧಿಕಾರಿ, ಬೆಳಗಾವಿ ಮಹಾನಗರ ಪಾಲಿಕೆ ಇವರಿಗೆ ಅಧಿಕ ಪ್ರಭಾರ ನೀಡಲಾಗಿದೆ.
  iii. ಪಬ್ಲಿಕ್ ಎಂಗೇಜ್ಮೆಂಟ್ ಅಧಿಕಾರಿ (Public Engagement Officer) ಹುದ್ದೆಯನ್ನು ಸಹಾಯಕ ಅಭಿಯಂತರರು, ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಇವರಿಗೆ ಅಧಿಕ ಪ್ರಭಾರ ನೀಡಲಾಗಿದೆ.

ಮುಂದುವರೆದು, CITIIS 2.0 ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ನಿಯಮಾನುಸಾರ ಮತ್ತು ಪಾರದರ್ಶಕತೆಯಿಂದ ನೇಮಕಾತಿ ಪ್ರಕ್ರಿಯೆ ನಡೆಸಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಕಡತ ಸಂಖ್ಯೆ: ನಅಇ 76 ಸಿಎಸ್ಎಸ್ 2026

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು.